## 2 ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.

ಸಿ.ಸಿ. ನಂ.1132/2010
ಸಿಡಬ್ಲ್ಯೂ. 6 ಪಿಡಬ್ಲ್ಯೂ4

| | | |
|---|---|---|
| ಸಾಕ್ಷಿಯ ಹೆಸರು | - | ಕುಬೆರಪ್ಪ ಭೂತಿ |
| ವಯಸ್ಸು | - | 78 ವರ್ಷ |
| ಉದ್ಯೋಗ | - | ನಿವೃತ್ತ ಸರ್ಕಾರಿ ನೌಕರ |
| ವಾಸ | - | ಬನಗಾರ ಗಲ್ಲಿ ತಾ ಗೋಕಾಕ |

ದಿನಾಂಕಃ 14-06-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಮಾನ್ಯ.ಸ.ಸ.ಅ.ರವರಿಂದಃ

ಸುಮಾರು 12 ವರ್ಷಗಳ ಹಿಂದೆ ನಾನು , ನನ್ನ ಮೊಮ್ಮಗ ಹಾಗೂ ನನ್ನ ಹೆಂಡತಿಯೊಂದಿಗೆ ಗೋಕಾಕದಿಂದ ಹುಬ್ಬಳ್ಳಿಯಿಂದ ಕೆಎಸ್ ಆರ ಟಿಸಿ ಬಸ್ಸನಲ್ಲಿ ಹೊರಟಿದ್ದೇವು. ನಾನು ನಿದ್ದೆಯಲ್ಲಿದ್ದಾಗ ಸ್ವಪ್ಪಳವಾಗಿ ಎಚ್ಚರವಾದಾಗ ಬಸ ಅಪಘಾತವಾಗಿತ್ತು , ನನಗೆ ಹಾಗೂ ನನ್ನ ಹೆಂಡತಿಯ ಮೊಣಕಾಲಿಗಳಿಗೆ ಪೆಟ್ಟಾಗಿದ್ದು , ಚಾಸಾ8 ಇವನಿಗೆ ಮುಖಕ್ಕೆ ಸಾದಾ ಸ್ವರೂಪದ ಗಾಯವಾಗಿತ್ತು . ಸದರಿ ಬಸ ನಂಬರ ಹಾಗೂ ಬಸ್ಸ ಚಾಲಕನ ಹೆಸರು ಹಾಗೂ ಅಪಘಾತ ಯಾರ ತಪ್ಪಿನಿಂದ ಆಯಿತು ಎಂದು ನನಗೆ ಹೇಳಲು ಆಗುವುದಿಲ್ಲ. ಅಪಘಾತವು ಯಾವ ಸ್ಥಳದಲ್ಲಿ ಆಗಿರುತ್ತದೆ ಎಂದು ನನಗೆ ನೆನಪಿಲ್ಲ. ಬಸನಲ್ಲಿದ್ದ ಇತರ ಪ್ರಯಾಣಿಕರಿಗೂ ಸಹ ಪೆಟ್ಟಾಗಿರುತ್ತದೆ ನಂತರ ನಮ್ಮನ್ನೆಲ್ಲಾ 108 ಅಂಬುಲೆನ್ಸ ಗಾಡಿಯಲ್ಲಿ ಉಪಚಾರಕ್ಕಾಗಿ ಗೋಕಾಕ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದು ಇರುತ್ತದೆ. ಈ ವಿಷಯವಾಗಿ ಪೊಲೀಸರಿಗೆ ಚಾಸಾ-1 ರವರು ಪಿರ್ಯಾದಿ ನೀಡಿದ್ದು ಇರುತ್ತದೆ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೇಳಿದರು, ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ.ಸ.ಸ.ಅ.ರವರಿಂದಃ

ನಾವು ಪ್ರಯಾಣಿಸುತ್ತಿದ್ದ ಬಸ್ ಕೆಎ-27 ಎಫ್ 382 ಮಮದಾಪುರ ಕ್ರಾಸ ದಾಟಿದ ನಂತರ ಬಸ ಚಾಲಕ ಪ್ರಕಾಶ ಈರಣಗೌಡ ಪಾಟೀಲ ಬಸನ್ನು ಅತೀವೇಗವಾಗಿ ನಿಷ್ಕಾಳಜೀತನಿಂದ ನಡೆಸಿಕೊಂಡು ಹೋದವನೆ ನಂದಿಕಟ್ಟಿ ಬಸಸ್ಟಾಪ ದಾಟಿ ಕುಬಸದ ಇವರ ಹೊಲದ ಹತ್ತಿರ ರಸ್ತೆಕಡೆಗೆ

ಗಮನ ಕೊಡದೆ ಬಸನ್ನು ಯರಗಟ್ಟಿ ಕಡೆಯಿಂದ ಗೋಕಾಕ ಕಡೆಗೆ ಬರುತ್ತಿದ್ದ ಕೆಎಸಆರಟಿಸಿ ಬಸಗೆ ಡಿಕ್ಕಿ ಹೊಡೆಸಿ ಅಪಘಾತ ಮಾಡಿದನು. ಆಗ ಸಮಯ ಮುಂಜಾನೆ 7 ಗಂಟೆ ಆಗಿತ್ತು ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ಹಾಗೆ ದಿಃ13-4-2010 ರಂದು ಪೊಲೀಸರಿಗೆ ಹೇಳಿಕೆ ನೀಡಿದ್ದೆನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿಪಿ-3 ಹಾಗೂ ಸಂಬಂಧಪಟ್ಟ ಭಾಗವನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ನಿಪಿ-3(ಎ) ಪ್ರಕಾರ ಪೊಲೀಸರಿಗೆ ಹೇಳಿಕೆ ನೀಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.

## 2 ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.

ಸಿ.ಸಿ. ನಂ.1132/2010
ಸಿಡಬ್ಲ್ಯೂ. 7 ಪಿಡಬ್ಲ್ಯೂ5

| | | |
|---|---|---|
| ಸಾಕ್ಷಿಯ ಹೆಸರು | - | ರೀಟಾ ಕುಬೆರಪ್ಪ ಭೂತಿ |
| ವಯಸ್ಸು | - | 71 ವರ್ಷ |
| ಉದ್ಯೋಗ | - | ಮನೆಗೆಲಸ |
| ವಾಸ | - | ಬನಗಾರ ಗಲ್ಲಿ ತಾ ಗೋಕಾಕ |

ದಿನಾಂಕಃ 19-06-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದಃ

ಚಾಸಾ-6 ನನ್ನ ಗಂಡನಾಗಬೇಕು. ಸುಮಾರು 10 ವರ್ಷಗಳ ಹಿಂದೆ ನಾನು , ನಾನು ಹಾಗೂ ನನ್ನ ಗಂಡನೊಂದಿಗೆ ಗೋಕಾಕದಿಂದ ಹುಬ್ಬಳ್ಳಿಯಿಂದ ಕೆಎಸ್ ಆರ ಟಿಸಿ ಬಸ್ಸನಲ್ಲಿ ಹೊರಟಿದ್ದೇವು. ನಾನು ನಿದ್ದೆಯಲ್ಲಿದ್ದಾಗ ಸಪ್ಪಳವಾಗಿ ಎಚ್ಚರವಾದಾಗ ಬಸ ಅಪಘಾತವಾಗಿತ್ತು , ನನ್ನ ಕೈಗೆ ಒಳಪೆಟ್ಟಾಗಿತ್ತು . ಸದರಿ ಬಸ ನಂಬರ ಹಾಗೂ ಬಸ್ಸ ಚಾಲಕನ ಹೆಸರು ಹಾಗೂ ಅಪಘಾತ ಯಾರ ತಪ್ಪಿನಿಂದ ಆಯಿತು ಎಂದು ನನಗೆ ಹೇಳಲು ಆಗುವುದಿಲ್ಲ. ಅಪಘಾತವು ಯಾವ ಸ್ಥಳದಲ್ಲಿ ಆಗಿರುತ್ತದೆ ಎಂದು ನನಗೆ ನೆನಪಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೇಳಿದರು, ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ

ನಾವು ಪ್ರಯಾಣಿಸುತ್ತಿದ್ದ ಬಸ್ ಚಾಲಕ ಮಮದಾಪುರ ಕ್ರಾಸ ದಾಟಿದ ಕುಬಸದರವರ ಹೊಲದ ಹತ್ತಿರ ರಸ್ತೆಕಡೆಗೆ ಗಮನಕೊಡದೆ ನಮ್ಮ ಎದುರುಗಡೆಯಿಂದ ಬರುತ್ತಿದ್ದ ಕೆಎಸಆರಟಿಸಿ ಬಸ್ಸಗೆ ಡಿಕ್ಕಿಪಡಿಸಿಸ ಅಪಘಾತ ಮಾಡಿದನು, ಆಗ ಮುಂಜಾನೆ 07 ಗಂಟೆ ಆಗಿತ್ತು. ಅಪಘಾತದಿಂದ ಎರಡೂ ಬಸನ ಹಿಂಬಾಗ ಜಬ್ಬಿ ಲುಕ್ಷಾಣ ಆಗಿದ್ದವು. ನಾವು ಪ್ರಯಾಣಿಸುತ್ತಿದ್ದ ಬಸನಂಬರ ಕೆಎ-27 ಎಫ್ 382 ಮತ್ತು ಚಾಲಕನ ಹೆಸರು ಪ್ರಕಾಶ ಈರಣಗೌಡ ಪಾಟೀಲ, ಅಪಘಾತಕ್ಕಿಡಾದ ಇನ್ನೊಂದು

ಬಸನ ಚಾಲಕನ ಹೆಸರು ಲಕ್ಷ್ಮಣ ಬಸಪ್ಪ ಧರೆಪ್ಪನವರ ಹಾಗೂ ಬಸ ನಂ ಕೆಎ-23 ಎಫ್ 270. ಸದರಿ ಅಪಘಾತದಿಂದ ನಮ್ಮ ಜೊತೆ ಪ್ರಯಾಣಿಸುತ್ತಿದ್ದ ಪ್ರಯಾಣಿಕರಿಗೂ ಹಾಗೂ ಅಪಘಾತಕ್ಕೆ ಒಳಪಟ್ಟ ಬಸನಲ್ಲಿದ್ದ ಡ್ರೈವರ ಹಾಗೂ ಕಂಡಕ್ಟರರಿಗೂ ಹಾಗೂ ಇತರ ಪ್ರಯಾಣಿಕರಿಗೂ ಸಹ ಪೆಟ್ಟಾಗಿತ್ತು. ಈ ವಿಷಯವಾಗಿ ಚಾಸಾ-1 ರವರು ಆರೋಪಿತನ ವಿರುದ್ಧ ದೂರು ನೀಡಿರುತ್ತಾರೆಂದರೆ ಸರಿಯಲ್ಲ.ಈ ಮೇಲೆ ಹೇಳಿದ ಹಾಗೆ ದಿಃ13-4-2010 ರಂದು ಪೊಲೀಸರಿಗೆ ಹೇಳಿಕೆ ನೀಡಿದ್ದೆನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿಪಿ-4 ಹಾಗೂ ಸಂಬಂಧಪಟ್ಟ ಭಾಗವನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ನಿಪಿ-4(ಎ) ಪ್ರಕಾರ ಪೊಲೀಸರಿಗೆ ಹೇಳಿಕೆ ನೀಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.

2 ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.

ಸಿ.ಸಿ. ನಂ.1132/2010
ಸಿಡಬ್ಲ್ಯೂ. 9 ಪಿಡಬ್ಲ್ಯೂ.6

ಸಾಕ್ಷಿಯ ಹೆಸರು - ಲಕ್ಷ್ಮಣ ಬಸಪ್ಪ ಧರೇಪ್ಪನವರ

ವಯಸ್ಸು - 49 ವರ್ಷ

ಉದ್ಯೋಗ - ಸೀಪಾಯಿ ಕೆಎಸ್ ಆರ್ ಟಿಸಿ ವಿಭಾಗ

ವಾಸ - ಹುಕ್ಕೇರಿ

ದಿನಾಂಕಃ 19-06-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಮಾನ್ಯ.ಸ.ಸ.ಅ.ರವರಿಂದಃ

1998 ರಿಂದ 2010 ರವರೆಗೆ ನಾನು ಗೋಕಾಕ ಕೆಎಸ್ ಆರಟಿಸಿ ಡಿಪೋದಲ್ಲಿ ಚಾಲಕನಾಗಿ ಕರ್ತವ್ಯವನ್ನು ನಿರ್ವಹಿಸಿದ್ದೆನೆ. ಸುಮಾರು 10 ವರ್ಷಗಳ ಹಿಂದೆ ನಾವು ಬಸ ನಂ ಕೆಎ-23 ಎಫ್ 270 ರಲ್ಲಿ ನಾನು ಚಾಲಕನಾಗಿ ಹಾಗೂ ಚಾಸಾ-10 ರವರು ನಿರ್ವಾಹಕರಾಗಿ ನಾವು ಗೋಕಾಕ ಕಡಬಿ ಶಿವಾಪುರಿದಿಂದ ಗೋಕಾಕ ಕಡೆಗೆ ಬರುತ್ತಿದ್ದೆವು. ನಾನು ಬಸ್ಸನ್ನು ನಂದಿಕಟ್ಟಿ ಗ್ರಾಮದ ಹತ್ತಿರ ಬಸ್ಸನ್ನು ನಿಲ್ಲಿಸಿದ್ದೆನು. ನಮ್ಮ ಎದುರುಗಡೆ ರಸ್ತೆಯ ಪಕ್ಕದಲ್ಲಿ ಬೆಂಕಿ ಹಚ್ಚಿದ್ದರಿಂದ ಹೊಗೆಯು ರಸ್ತೆ ತುಂಬೆಲ್ಲ ಆವರಿಸಿತ್ತು , ರಸ್ತೆಯು ಸರಿಯಾಗಿ ಕಾಣಿಸುತ್ತಿರಲಿಲ್ಲ ಆ ಸಮಯದಲ್ಲಿ ಎದುರುಗಡೆಯಿಂದ ಒಂದು ಕೆಎಸಆರಟಿಸಿ ಬಸ್ಸ ಬಂದು ನಮ್ಮ ಬಸಗೆ ಅಪಘಾತ ಪಡಿಸಿತು. ಆಗ ಸಮಯ ಮುಂಜಾನೆ 6-45 ಆಗಿತ್ತು. ಸದರಿ ಅಪಘಾತದಿಂದ ಎರಡೂ ಬಸಗಳ ಮುಂದಿನ ಭಾಗ ಜಬ್ಬಿ ನುಕ್ಷಾಣ ಆಗಿದ್ದು ನನ್ನ ಎರಡೂ ಕಾಲು ಹಾಗೂ ಕಾಲುಗಳಿಗೆ ಪೆಟ್ಟಾಗಿದ್ದು , ನಮ್ಮ ಬಸನಲ್ಲಿ ಪ್ರಯಾಣಿಸುತ್ತಿದ್ದ ಪ್ರಯಾಣಿಕರಿಗೆ ಯಾವುದೇ ಗಾಯ ಆಗಿರುವುದಿಲ್ಲ. ಎದುರುಗಡೆಯಿಂದ ಬಂದ ಬಸ ನಂಬರ ನನಗೆ ನೆನಪಿರುವುದಿಲ್ಲ. ಅಪಘಾತ ಪಡಿಸಿದ ಬಸ್ಸನ್ನು ಒಬ್ಬ ಪಾಟೀಲ ಎಂಬುವನು ಚಾಲನೇ ಮಾಡುತ್ತಿದ್ದನು. ಅಪಘಾತ ಪಡಿಸಿದ ಬಸನಲ್ಲಿ ಪ್ರಯಾಣಿಸುತ್ತಿದ್ದ ಪ್ರಯಾಣಿಕರಿಗೆ ಪೆಟ್ಟಾಗಿತ್ತು. ಸ್ಟೆರಿಂಗ್ ಮಧ್ಯದಲ್ಲಿ ಸಿಕ್ಕಿದ್ದ ನನ್ನ ಕಾಲನ್ನು ತೆಗೆದು ನನ್ನನ್ನು 108 ವಾಹನದಲ್ಲಿ ನನ್ನನ್ನು ಸರ್ಕಾರಿ ಆಸ್ಪತ್ರೆಗೆ ಉಪಚಾರಕ್ಕಾಗಿ ದಾಖಲಿಸಿದರು. ಸದರಿ ಅಪಘಾತವು ಆರೋಪಿಯ ತಪ್ಪಿನಿಂದ ಆಗಿರುತ್ತದೆ. ನಾನು ಬಸ್ಸನ್ನು ತರುಬಿಕೊಂಡು ನಿಂತಾಗ ಆರೋಪಿಯು ಜೋರಾಗಿ ಬಸನ್ನು ಚಾಲನೆ ಮಾಡಿಕೊಂಡು

ಬಂದು ನಮ್ಮ ಬಸ್ಸಗೆ ಅಪಘಾತ ಪಡಿಸಿದ್ದು ಇರುತ್ತದೆ. ಅಪಘಾತದ ಸಮಯದಲ್ಲಿ ಆರೋಪಿತನನ್ನು ನೋಡಿರುತ್ತೆನೆ. ಆರೋಪಿಯೇ ಅಪಘಾತವಾದ ಸಮಯದಲ್ಲಿ ಬಸ್ಸನ್ನು ಚಲಾಯಿಸುತ್ತಿದ್ದನು.

ಪಾಟೀ ಸವಾಲುಃ ಆರೋಪಿಪರ ವಕೀಲರಿಂದಃ- ಈ ಸಮಯದಲ್ಲಿ ಆರೋಪಿಪರ ವಕೀಲರು ಸಮಯ ಕೋರಿದ್ದು ನೀರಾಕರಿಸಲಾಗಿದೆ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.

2 ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.

ಸಿ.ಸಿ. ನಂ.1132/2010
ಸಿಡಬ್ಲ್ಯೂ. 10 ಪಿಡಬ್ಲ್ಯೂ.7

| | | |
|---|---|---|
| ಸಾಕ್ಷಿಯ ಹೆಸರು | - | ಮಹಾದೇವ ಶಂಕರಪ್ಪ ಹಂಜಿ |
| ವಯಸ್ಸು | - | 62 ವರ್ಷ |
| ಉದ್ಯೋಗ | - | ನಿವೃತ ಕೆಎಸಆರಟಿಸಿ ನಿರ್ವಾಹಕ |
| ವಾಸ | - | ಕಡಬಿಶಿವಾಪುರ |

ದಿನಾಂಕಃ 19-06-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಮಾನ್ಯ.ಸ.ಸ.ಅ.ರವರಿಂದಃ

1994 ರಿಂದ 2018 ರವರೆಗೆ ನಾನು ಗೋಕಾಕ ಕೆಎಸ್ ಆರಟಿಸಿ ಡಿಪೋದಲ್ಲಿ ನಿರ್ವಾಹಕನಾಗಿ ಕರ್ತವ್ಯವನ್ನು ನಿರ್ವಹಿಸಿದ್ದೆನೆ. ದಿಃ13-04-2010 ರಂದು ನಾವು ಬಸ ನಂ ಕೆಎ-23 ಎಫ್ 270 ರಲ್ಲಿ ನಾನು ನಿರ್ವಾಹಕನಾಗಿ ಹಾಗೂ ಚಾಸಾ-9 ರವರು ಚಾಲಕರಾಗಿ ನಾವು ಗೋಕಾಕ ಕಡಬಿ ಶಿವಾಪುರಿದಿಂದ ಗೋಕಾಕ ಕಡೆಗೆ ಬರುತ್ತಿದ್ದೆವು. ನಾವು ಬಸ್ಸನ್ನು ನಂದಿಕಟ್ಟಿ ಗ್ರಾಮದಲ್ಲಿ ಪ್ರಯಾಣಿಕರವನ್ನು ಹತ್ತಿಸುವಗೊಸ್ಕರ ತರುಬಿಸಿದ್ದೆವು. ನಮ್ಮ ಎದುರುಗಡೆ ರಸ್ತೆಯ ಪಕ್ಕದಲ್ಲಿ ಬೆಂಕಿ ಹಚ್ಚಿದ್ದರಿಂದ ಹೊಗೆಯು ರಸ್ತೆ ತುಂಬೆಲ್ಲ ಆವರಿಸಿತ್ತು , ರಸ್ತೆಯು ಸರಿಯಾಗಿ ಕಾಣಿಸುತ್ತಿರಲಿಲ್ಲ ಆ ಸಮಯದಲ್ಲಿ ಎದುರುಗಡೆಯಿಂದ ಒಂದು ಕೆಎಸಆರಟಿಸಿ ಬಸ್ಸ ಬಂದು ನಮ್ಮ ಬಸಗೆ ಅಪಘಾತ ಪಡಿಸಿತು. ಆಗ ಸಮಯ ಮುಂಜಾನೆ 6-45 ಆಗಿತ್ತು. ಸದರಿ ಅಪಘಾತದಿಂದ ಎರಡೂ ಬಸಗಳ ಮುಂದಿನ ಭಾಗ ಜಬ್ಬಿ ನುಕ್ಷಾಣ ಆಗಿದ್ದು ನಮ್ಮ ಬಸ್ಸನ ಚಾಲಕ ಚಾಸಾ-9 ಇವರ ಎರಡೂ ಕಾಲು ಗಳಿಗೆ ಪೆಟ್ಟಾಗಿದ್ಧು , ಆರೋಪಿಗೂ ಸಹ ಪೆಟ್ಟಾಗಿತ್ತು , ನಮ್ಮ ಬಸನಲ್ಲಿ ಪ್ರಯಾಣಿಸುತ್ತಿದ್ದ ಪ್ರಯಾಣಿಕರಿಗೆ ಪೆಟ್ಟಾಗಿತ್ತು . ಎದುರುಗಡೆಯಿಂದ ಬಂದ ಬಸ ನಂಬರ ನನಗೆ ನೆನಪಿರುವುದಿಲ್ಲ. ಅಪಘಾತ ಪಡಿಸಿದ ಬಸ್ಸನ ಚಾಲಕನ ಹೆಸರು ನನಗೆ ಗೊತ್ತಿಲ್ಲ. ಅಪಘಾತ ಪಡಿಸಿದ ಬಸನಲ್ಲಿ ಪ್ರಯಾಣಿಸುತ್ತಿದ್ದ ಪ್ರಯಾಣಿಕರಿಗೆ ಪೆಟ್ಟಾಗಿತ್ತು. ಸದರಿ ಅಪಘಾತವು ಎದುರು ಬಸನ ಚಾಲಕನ ತಪ್ಪಿನಿಂದ ಆಗಿರುತ್ತದೆ. ಅಪಘಾತದ ನಂತರ ಪೊಲೀಸರು ಸ್ಥಳದ ಪಂಚನಾಮೆ

ಮಾಡಿರುತ್ತಾರೆ. ನಾನು ಪೊಲೀಸರಿಗೆ ಯಾವುದೇ ಸ್ಥಳವನ್ನು ತೋರಿಸಿಲ್ಲ , ಪೊಲೀಸರು ನನ್ನ ಸಮಕ್ಷಮ ಪಂಚನಾಮೆ ಮಾಡಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆರೋಪಿತನನ್ನು ಈ ಮುಂಚೆ ನಾನು ನೋಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೇಳಿದರು, ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ</u>

ಅಪಘಾತ ಪಡಿಸಿದ ಕೆಎಸ್‌ಆರಟಿಸಿ ಬಸ ನಂಬರ ಕೆಎ-27 ಎಫ್ 382 ಬಸ ಚಾಲಕ ಪ್ರಕಾಶ ಈರಣಗೌಡ ಪಾಟೀಲ ಅವರ ಮೇಲೆ ಚಾಸಾ-1 ರವರು ಪಿರ್ಯಾದಿ ಕೊಟ್ಟಿದ್ದು ಇರುತ್ತದೆ ನಾನು ಉಪಚಾರ ಮಾಡಿಕೊಂಡು ಬಂದು ಅಪರಾಧ ಸ್ಥಳದ ಪಂಚನಾಮೆ ಕಾಲಕ್ಕೆ ಹಾಜರಾಗಿ ಅಪರಾಧ ಸ್ಥಳವನ್ನು ತೋರಿಸಿ ಮಾಹಿತಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ಹಾಗೆ 13-4-2010 ರಂದು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿಪಿ-5 , ಹಾಗೂ ಸಂಬಂಧಪಟ್ಟ ಭಾಗವನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ದಿಃ13-4-2010 ರಂದು ಪೊಲೀಸರು ಅಪಘಾತ ಸ್ಥಳಕ್ಕೆ ಬಂದಾಗ ನಾ ತೋರಿಸಿದ ಅಪಘಾತ ಸ್ಥಳದ ಪಂಚನಾಮೆಯನ್ನು ಪಂಚರ ಸಸಮಕ್ಷಮ ನಿಪಿ-2 ರಂತೆ ಜರುಗಿಸಿರುತ್ತಾರೆಂದರೆ ಸರಿಯಲ್ಲ. ನಿಪಿ-5(ಎ) ಪ್ರಕಾರ ಪೊಲೀರಿಗೆ ಹೇಳಿಕೆ ನೀಡಿದ್ದರೂ ಸಹ , ನಿಪಿ-2 ರಂತೆ ಪೊಲೀಸರು ಪಂಚನಾಮೆ ಮಾಡಿದ್ದರೂ ಸಹ, ನ್ಯಾಯಾಲಯದ ಮುಂದಿರುವ ಆರೋಪಿಯೇ ಆ ದಿನ ಸದರಿ ಬಸನ್ನು ಚಲಾಯಿಸುತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿಪರ ವಕೀಲರಿಂದಃ-</u> ಈ ಸಮಯದಲ್ಲಿ ಆರೋಪಿಪರ ವಕೀಲರು ಸಮಯ ಕೋರಿದ್ದು ನೀರಾಕರಿಸಲಾಗಿದೆ.
ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.

2 ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.

ಸಿ.ಸಿ. ನಂ.1132/2010
ಸಿಡಬ್ಲ್ಯೂ. 12 ಪಿಡಬ್ಲ್ಯೂ.8

ಸಾಕ್ಷಿಯ ಹೆಸರು - ಮಾರುತಿ ಮಲ್ಲೇಶಪ್ಪ ಸೊಗಲದ

ವಯಸ್ಸು - 55 ವರ್ಷ

ಉದ್ಯೋಗ - ಶಿಕ್ಷಕ

ವಾಸ - ಶಿವಾಪುರ ತಾ ಯರಗಟ್ಟಿ

ದಿನಾಂಕಃ 23-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಮಾನ್ಯ.ಸ.ಸ.ಅ.ರವರಿಂದಃ

ಚಾಸಾ-1 ರವರ ಪರಿಚಯ ಇರುವುದಿಲ್ಲ. ನಾನು ಯಾವುದೇ ಅಪಘಾತವನ್ನು ನೋಡಿರುವುದಿಲ್ಲ, ಅಪಘಾತದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೇಳಿದರು, ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ.ಸ.ಸ.ಅ.ರವರಿಂದಃ**

ದಿಃ13-4-2010 ರಂದು ಬೆಳಿಗ್ಗೆ ನ ನಾನು ನಮ್ಮೂರಿಂದ ಗೋಕಾಕಗೆ ಹೋಗುವ ಸಲುವಾಗಿ ತಾವಲಗೇರಿ ಕ್ರಾಸ ಹತ್ತಿರ ಬಂದು ಬಸನಿಲ್ದಾಣದಲ್ಲಿ ನಿಂತಾಗ ಆಗ ಕಡಬಿ ಶಿವಾಪುರ ಕಡೆಯಿಂದ ಗೋಕಾಕಕ್ಕೆ ಬರುವ ಬಸ್ಸ ಬಂದಿದ್ದು ನಾನು ಸದರಿ ಬಸನಲ್ಲಿ ಹತ್ತಿ ಕುಳಿತಿದ್ದು ನನ್ನಂತೆ ಪ್ರಯಾಣಿಕರೂ ಸಹ ಬಸ್ಸನಲ್ಲಿ ಇದ್ದರು.ನಂತರ ಬಸ ಚಾಲಕನು ಬಸ್ಸನ್ನು ಶುರುಮಾಡಿಕೊಂಡು ಗೋಕಾಕಕ್ಕೆ ತನ್ನ ರಸ್ತೆಬದಿಯಿಂದ ನಂದಿಕಟ್ಟಿ ಬಸ್ಟಾಫ ಸಮೀಪ ಕುಬಸದ ಇವರ ಹೋಲದ ಹತ್ತಿರ ನಮ್ಮ ಬಸ್ಸನ್ನು ಗೋಕಾಕ ಕಡೆ ರಸ್ತೆ ಬಂದಿಯಿಂದ ಬರುತ್ತಿರುವಾಗ ಅದೇ ವೇಳೆಗೆ ಒಬ್ಬ ಕೆಎಸಆರಟಿಸಿ ಬಸ ಚಾಲಕನು ತನ್ನ ಬಸ್ಸನ್ನು ಗೋಕಾಕ ಕಡೆಯಿಂದ ಯರಗಟ್ಟಿ ಕಡೆಗೆ ನಮ್ಮ ಬಸ್ಸಿನ ಎದುರುಗಡೆಯಿಂದ ಬರುತ್ತಿದ್ದಾಗ ಅತೀವೇಗವಾಗಿ ಮತ್ತು ನಿಷ್ಕಾಳಜೀತನದಿಂದ ನಡೆಸಿಕೊಂಡು ಬಂದವನೆ ರಸ್ತೆ ಕಡೆ ಗಮನ ಕೊಡದೇ ನಮ್ಮ ಬಸ್ಸಿಗೆ ಎದುರುಗಡೆ ಬಸ್ಸ ಚಾಲಕನು ಬಸ್ಸನ್ನು ಡಿಕ್ಕಿಪಡಿಸಿ ಅಪಘಾತ ಮಾಡಿದನು ಎಂದರೆ ಸರಿಯಲ್ಲ. ಆಗ ಮುಂಜಾನೆ 07 ಗಂಟೆ ಆಗಿತ್ತು. ಅಪಘಾತದಿಂದ ನಾನು ಪ್ರಯಾಣಿಸುತ್ತಿದ್ದ ಬಸ್ಸು ಹಾಗು ಎದುರುಗಡೆಯಿಂದ ಬಂದ ಬಸ್ಸು ಮುಂದಿನ ಭಾಗ

ಸಂಪೂರ್ಣ ಜಬ್ಬಿಲುಕ್ಷಾಣ ಆಗಿದ್ದವು ಎಂದರೆ ಸರಿಯಲ್ಲ. ನಾನು ಬಸ್ಸನ ನಂಬರ ನೋಡಿದ್ದು ಅದರ ನಂಬರ ಕೆಎ-23 ಎಫ್ 270 ಅದು ಗೋಕಾಕ ಡಿಪೋದ ಬಸ ಇದ್ದು ಅದರ ಚಾಲಕನ ಹೆಸರು ಲಕ್ಷ್ಮಣ ಬಸಪ್ಪ ಧರೆಪ್ಪನವರ ಅಂತಾ ಇದ್ದು ಹಾಗು ಕಂಡೇಕ್ಟರನ ಹೆಸರು ಮಹಾದೇವಪ್ಪ ಶಂಕರಪ್ಪ ಹಂಜಿ ಇತ್ತು ಎಂದರೆ ಸರಿಯಲ್ಲ. ಬಸ ಚಾಲಕ ಮತ್ತು ಕಂಡೇಕ್ಟರನಾದ ಚಾಸಾ-9,10 ಹಾಗು ನಮ್ಮ ಗಾಡಿಯ ಪ್ರಯಾಣಿಕರಾದ ಚಾಸಾ-11,14,16,15 ಇವರಿಗೂ ಕೂಡ ಸಾದಾ ವ ಭಾರಿ ಪೆಟ್ಟಾಗಿತ್ತು ಎಂದರೆ ಸರಿಯಲ್ಲ.ನಮ್ಮ ಬಸ್ಸಗೆ ಅಪಘಾತ ಪಡಿಸಿದ್ದ ಎದುರಗಡೆ ಬಸ ನಂಬರ ನೋಡಿದ್ದು ಅದರ ನಂಬರ ಕೆಎ-27 ಎಫ್ 382 ಇದ್ದು ಅದು ಹಿರೇಕೆರೂರ ಡಿಪೋದ ಬಸ್ಸ ಇದ್ದು ಸದರಿ ಬಸ ಚಾಲಕನ ಹೆಸರು ಪ್ರಕಾಶ ಈರನಗೌಡ ಪಾಟೀಲ ಅಂತಾ ಹಾಗು ಕಂಡೆಕ್ಟರನ ಹೆಸರು ಫಕೀರಪ್ಪ ಸಣ್ಣಯಲ್ಲಪ್ಪ ಬೆಂಡಿಗೇರಿ ಇತ್ತು ಅಂದರೆ ಸರಿಯಲ್ಲ. ಅಪಘಾತ ಪಡಿಸಿದ ಬಸ್ಸನ ಚಾಲಕ ಹಾಗು ಕಂಡೇಕ್ಟರ ಮತ್ತು ಬಸ್ಸನಲ್ಲಿದ್ದ ಪ್ರಯಾಣಿಕರಾದ ಚಾಸಾ-5 ರಿಂದ 8,ಚಾಸಾ-1 ಇವರ ಕೈಕಾಲುಗಳಿಗೆ ಮುಖಕ್ಕೆ , ಮೈಗೆ ಸಾದಾ ವ ಭಾರಿ ಪೆಟ್ಟಾಗಿತ್ತು ಅಂದರೆ ಸರಿಯಲ್ಲ. ಅಪಘಾತದಲ್ಲಿ ಪೆಟ್ಟು ಹತ್ತದೇ ಇರುವ ಇನ್ನೂಳಿದ ಪ್ರಯಾಣಿಕರು ಎರಡೂ ಬಸ್ಸಗಳಿಂದ ಇಳಿದು ಹೋದರು ಹಾಗು ಅವರ ಹೆಸರು ಗೊತ್ತಾಗಲಿಲ್ಲ ಮತ್ತು ಪೆಟ್ಟು ಹತ್ತಿದ ನಮ್ಮೆಲ್ಲರನ್ನು ಕೂಡಲೇ 108 ಅಂಬುಲೇನ್ಸ ಗಾಡಿ ಬಂದಿದ್ದು ಉಪಚಾರಕ್ಕೆಂದು ಗೋಕಾಕ ಸರ್ಕಾರಿ ಆಸ್ಪತ್ರೆಗೆ ನಾವು 15 ಜನರು ದಾಖಲಾದೆವು ಅಂದರೆ ಸರಿಯಲ್ಲ. ಈ ಕುರಿತು ಚಾಸಾ-1 ರವರು ಆರೋಪಿತನ ವಿರುದ್ಧ ದೂರು ನೀಡಿರುತ್ತಾರೆಂದರೆ ಸರಿಯಲ್ಲ. ಈ ಮೇಲೆ ಹೇಳಿದ ಹಾಗೆ ದಿಃ13-4-2010 ರಂದು ಪೊಲೀಸರಿಗೆ ಹೇಳಿಕೆ ನೀಡಿದ್ದೆನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿಪಿ-6 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.

## 2 ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.

ಸಿ.ಸಿ. ನಂ.1132/2010
ಸಿಡಬ್ಲ್ಯೂ. 16 ಪಿಡಬ್ಲ್ಯೂ.9

ಸಾಕ್ಷಿಯ ಹೆಸರು - ಪುಷ್ಪಾ ಅಶೋಕ ಹುಂಡೇಕಾರ

ವಯಸ್ಸು - 56 ವರ್ಷ

ಉದ್ಯೋಗ - ಮನೆಗೆಲಸ

ವಾಸ - ಕಡಬಿ ತಾ ಸವದತ್ತಿ

ದಿನಾಂಕಃ 23-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಮಾನ್ಯ.ಸ.ಸ.ಅ.ರವರಿಂದಃ

ಚಾಸಾ-1 ರವರ ಪರಿಚಯ ಇರುವುದಿಲ್ಲ. ನಾನು ಯಾವುದೇ ಅಪಘಾತವನ್ನು ನೋಡಿರುವುದಿಲ್ಲ, ಅಪಘಾತದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೇಳಿದರು, ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ.ಸ.ಸ.ಅ.ರವರಿಂದಃ**

ದಿಃ13-4-2010 ರಂದು ಬೆಳಿಗ್ಗೆ ನಾನು ನಮ್ಮೂರಿಂದ ಗೋಕಾಕಗೆ ಹೋಗುವ ಸಲುವಾಗಿ ನಾನು ನಮ್ಮೂರ ಬಸನಿಲ್ದಾಣದಲ್ಲಿ ಬಂದು ಗೋಕಾಕಕ್ಕೆ ಬರುವ ಬಸನಲ್ಲಿ ಹತ್ತಿ ಕುಳಿತಿದ್ದು ನನ್ನಂತೆ ಪ್ರಯಾಣಿಕರೂ ಸಹ ಬಸ್ಸನಲ್ಲಿ ಇದ್ದರು. ನಂತರ ಬಸ ಚಾಲಕನು ಬಸ್ಸನ್ನು ಶುರುಮಾಡಿಕೊಂಡು ಗೋಕಾಕಕ್ಕೆ ತನ್ನ ರಸ್ತೆಬದಿಯಿಂದ ಬರುತ್ತಿದ್ದಾಗ ನಂದಿಕಟ್ಟಿ ಬಸ್ಟಾಪ ಸಮೀಪ ಕುಬಸದ ಇವರ ಹೋಲದ ಹತ್ತಿರ ನಮ್ಮ ಬಸ್ಸನ್ನು ಗೋಕಾಕ ಕಡೆ ರಸ್ತೆ ಬಂದಿಯಿಂದ ಬರುತ್ತಿರುವಾಗ ಅದೇ ವೇಳೆಗೆ ಒಬ್ಬ ಕೆಎಸಆರಟಿಸಿ ಬಸ ಚಾಲಕನು ತನ್ನ ಬಸ್ಸನ್ನು ಗೋಕಾಕ ಕಡೆಯಿಂದ ಯರಗಟ್ಟಿ ಕಡೆಗೆ ನಮ್ಮ ಬಸ್ಸಿನ ಎದುರುಗಡೆಯಿಂದ ಬರುತ್ತಿದ್ದಾಗ ಅತೀವೇಗವಾಗಿ ಮತ್ತು ನಿಷ್ಕಾಳಜೀತನದಿಂದ ನಡೆಸಿಕೊಂಡು ಬಂದವನೆ ರಸ್ತೆ ಕಡೆ ಗಮನ ಕೊಡದೇ ನಮ್ಮ ಬಸ್ಸಿಗೆ ಎದುರುಗಡೆ ಬಸ್ಸ ಚಾಲಕನು ಬಸ್ಸನ್ನು ಡಿಕ್ಕಿಪಡಿಸಿ ಅಪಘಾತ ಮಾಡಿದನು ಎಂದರೆ ಸರಿಯಲ್ಲ. ಆಗ ಮುಂಜಾನೆ 07 ಗಂಟೆ ಆಗಿತ್ತು. ಅಪಘಾತದಿಂದ ನಾನು ಪ್ರಯಾಣಿಸುತ್ತಿದ್ದ ಬಸ್ಸು ಹಾಗು ಎದುರುಗಡೆಯಿಂದ ಬಂದ ಬಸ್ಸು ಮುಂದಿನ ಭಾಗ ಜಬ್ಬಿ ಲುಕ್ಷಾಣ ಆಗಿದ್ದವು ಎಂದರೆ ಸರಿಯಲ್ಲ. ಸದರಿ ಅಪಘಾತದಿಂದ ನನ್ನ ಬೆನ್ನಿಗೆ,

ಮೈಗೆ ಕುಸಿದಂತೆ ಆಯಿತು ಮತ್ತು ಯಾವುದೇ ಪೆಟ್ಟು ಹತ್ತಿರಲಿಲ್ಲ. ಆಗ ನಾನು ನಮ್ಮ ಬಸ್ಸ ನೋಡಿದ್ದು ಅದರ ನಂಬರ ಕೆಎ-23 ಎಫ್ 270 ಅದು ಗೋಕಾಕ ಡಿಪೋದ ಬಸ ಇದ್ದು ಅದರ ಚಾಲಕನ ಹೆಸರು ಲಕ್ಷ್ಮಣ ಬಸಪ್ಪ ಧರೆಪ್ಪನವರ ಅಂತಾ ಇದ್ದು ಹಾಗು ಕಂಡೇಕ್ಟರನ ಹೆಸರು ಮಹಾದೇವಪ್ಪ ಶಂಕರಪ್ಪ ಹಂಜಿ ಇತ್ತು ಎಂದರೆ ಸರಿಯಲ್ಲ. ಬಸ ಚಾಲಕ ಮತ್ತು ಕಂಡೇಕ್ಟರನಾದ ಚಾಸಾ-9,10 ಹಾಗು ನಮ್ಮ ಗಾಡಿಯ ಪ್ರಯಾಣಿಕರಾದ ಚಾಸಾ-11,12,14,15 ಇವರಿಗೂ ಕೂಡ ಸಾದಾ ವ ಭಾರಿ ಪೆಟ್ಟಾಗಿತ್ತು ಎಂದರೆ ಸರಿಯಲ್ಲ.ನಮ್ಮ ಬಸ್ಸಗೆ ಅಪಘಾತ ಪಡಿಸಿದ್ದ ಎದುರಗಡೆ ಬಸ ನಂಬರ ನೋಡಿದ್ದು ಅದರ ನಂಬರ ಕೆಎ-27 ಎಫ್ 382 ಇದ್ದು ಅದು ಹಿರೇಕೆರೂರ ಡಿಪೋದ ಬಸ್ಸ ಇದ್ದು ಸದರಿ ಬಸ ಚಾಲಕನ ಹೆಸರು ಪ್ರಕಾಶ ಈರನಗೌಡ ಪಾಟೀಲ ಅಂತಾ ಹಾಗು ಕಂಡೆಕ್ಟರನ ಹೆಸರು ಫಕೀರಪ್ಪ ಸಣ್ಣಯಲ್ಲಪ್ಪ ಬೆಂಡಿಗೇರಿ ಇತ್ತು ಅಂದರೆ ಸರಿಯಲ್ಲ. ಅಪಘಾತ ಪಡಿಸಿದ ಬಸ್ಸನ ಚಾಲಕ ಹಾಗು ಕಂಡೇಕ್ಟರ ಮತ್ತು ಬಸ್ಸನಲ್ಲಿದ್ದ ಪ್ರಯಾಣಿಕರಾದ ಚಾಸಾ-5 ರಿಂದ 8,ಚಾಸಾ-1 ಇವರ ಕೈಕಾಲುಗಳಿಗೆ ಮುಖಕ್ಕೆ , ಮೈಗೆ ಸಾದಾ ವ ಭಾರಿ ಪೆಟ್ಟಾಗಿತ್ತು ಅಂದರೆ ಸರಿಯಲ್ಲ. ಅಪಘಾತದಲ್ಲಿ ಪೆಟ್ಟು ಹತ್ತದೇ ಇರುವ ಇನ್ನೂಳಿದ ಪ್ರಯಾಣಿಕರು ಎರಡೂ ಬಸ್ಸಗಳಿಂದ ಇಳಿದು ಹೋದರು ಹಾಗು ಅವರ ಹೆಸರು ಗೊತ್ತಾಗಲಿಲ್ಲ ಮತ್ತು ಪೆಟ್ಟು ಹತ್ತಿದ ನಮ್ಮೆಲ್ಲರನ್ನು ಕೂಡಲೇ 108 ಅಂಬುಲೇನ್ಸ ಗಾಡಿ ಬಂದಿದ್ದು ಉಪಚಾರಕ್ಕೆಂದು ಗೋಕಾಕ ಸರ್ಕಾರಿ ಆಸ್ಪತ್ರೆಗೆ ನಾವು 15 ಜನರು ದಾಖಲಾದೆವು ಅಂದರೆ ಸರಿಯಲ್ಲ. ನನಗೆ ಯಾವುದೇ ಪೆಟ್ಟು ಹತ್ತದೆ ಇದದ್ದರಿಂದ ನಾನು ಗೋಕಾಕ ಸರ್ಕಾರಿ ಆಸ್ಪತ್ರೆಯಲ್ಲಿ ಉಪಚಾರ ಮಾಡಿಸಿಕೊಳ್ಳಲಿಲ್ಲ. ಈ ಕುರಿತು ಚಾಸಾ-1 ರವರು ಆರೋಪಿತನ ವಿರುದ್ಧ ದೂರು ನೀಡಿರುತ್ತಾರೆಂದರೆ ಸರಿಯಲ್ಲ. ಈ ಮೇಲೆ ಹೇಳಿದ ಹಾಗೆ ದಿಃ13-4-2010 ರಂದು ಪೊಲೀಸರಿಗೆ ಹೇಳಿಕೆ ನೀಡಿದ್ದೆನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿಪಿ-7 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.